# ಸೇರ್ಪಡೆ ಮತ್ತು ತಿದ್ದುಪಡಿ

## ಸೇರ್ಪಡೆ (ಅಧ್ಯಾಯ - 2)

### ಪುಟ 160 ರಲ್ಲಿ ಗದಗ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯ ನಂತರ

**ಲೋಕ ಸಭಾ ಚುನಾವಣೆ - 1991**

ಹತ್ತನೇಯ ಲೋಕಸಭೆಗೆ ಸದಸ್ಯರನ್ನು ಚುನಾಯಿಸಲು 1991 ನೇ ಇಸವಿ ಜೂನ್ ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಜಿಲ್ಲೆಯಲ್ಲಿ ಎರಡು ಲೋಕ ಸಭೆ ಕ್ಷೇತ್ರಗಳಿದ್ದು ಧಾರವಾಡ ಉತ್ತರ ಕ್ಷೇತ್ರದಿಂದ ಕಾಂಗ್ರೆಸ್ಸಿನ ಡಿ.ಕೆ. ನಾಯ್ಕರ್‌ರವರು ಆಯ್ಕೆಯಾದರು. ಧಾರವಾಡ ದಕ್ಷಿಣ ಕ್ಷೇತ್ರವನ್ನು ಸಹ ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿ ಬಿ.ಎಂ. ಮುಜಾಹಿದ್‌ರ ಮೂಲಕ ಗೆದ್ದುಕೊಂಡಿತು.

**ಅಧ್ಯಾಯ 6**

ಪುಟಸಂಖ್ಯೆ 442, ಮೇಲಿನ ಎರಡು ವಾಕ್ಯಗಳ ನಂತರ ಈ ಮಾಹಿತಿ ಸೇರಿಸುವುದು.

ನಗರ ಪ್ರದೇಶಗಳಲ್ಲಿ ವ್ಯಾಪಾರ ವಾಣಿಜ್ಯ ನಿರತ ಗಂಡಸರ ಮತ್ತು ಮಹಿಳೆಯರ ಈ ಪ್ರಮಾಣಗಳು ಅನುಕ್ರಮವಾಗಿ 37,960 ಮತ್ತು 2,766. ತಾಲೂಕುವಾರಾಗಿ ವ್ಯಾಪಾರ ವಾಣಿಜ್ಯದಲ್ಲಿ ನಿರತರಾದವರ ಸಂಖ್ಯೆಯನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದರೆ ಪ್ರಮುಖ ವಾಣಿಜ್ಯ ಕೇಂದ್ರವಾದ ಹುಬ್ಬಳ್ಳಿಯನ್ನು ಒಳಗೊಂಡ ಹುಬ್ಬಳ್ಳಿ ತಾಲೂಕಿನಲ್ಲಿ ವಾಣಿಜ್ಯದಲ್ಲಿ ತೊಡಗಿದವರ ಒಟ್ಟು ಸಂಖ್ಯೆ 21,499 ಆಗಿದ್ದರೆ ಅವರಲ್ಲಿ ಬಹುಪಾಲು 20,726 ಜನ ಹುಬ್ಬಳ್ಳಿ ಧಾರವಾಡ ನಗರಪಾಲಿಕೆಯ ಸರಹದ್ದಿನಲ್ಲಿ ವಾಸವಾಗಿದ್ದವರು. ಗ್ರಾಮೀಣರ ಸಂಖ್ಯೆ ಕೇವಲ 773 ಆಗಿತ್ತು. ಜಿಲ್ಲೆಯಲ್ಲಿನ ಒಟ್ಟು ನಗರ ಪ್ರದೇಶದ ಸಂಖ್ಯೆಯಲ್ಲಿ ಅರ್ಧಭಾಗ ವಾಣಿಜ್ಯ ನಿರತರ ಸಂಖ್ಯೆ ಹುಬ್ಬಳ್ಳಿ ಧಾರವಾಡ ನಗರಪಾಲಿಕೆಯ ವ್ಯಾಪ್ತಿಯಲ್ಲೇ ಇದೆ. ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯ ಮಿತಿಯಲ್ಲಿ ವಾಣಿಜ್ಯದಲ್ಲಿ ನಿರತರಾದವರ ಪೈಕಿ 19,316 ಪುರುಷರಾಗಿದ್ದರೆ, ಮಹಿಳೆಯರ ಸಂಖ್ಯೆ 1,410. ಹುಬ್ಬಳ್ಳಿ ತಾಲೂಕಿನ ತರುವಾಯ ಗದಗ ತಾಲೂಕು ಹೆಚ್ಚುಜನ ವಾಣಿಜ್ಯ ನಿರತರನ್ನು ಹೊಂದಿತ್ತು. ಈ ತಾಲೂಕಿನ ಒಟ್ಟು ವಾಣಿಜ್ಯ ನಿರತರ ಸಂಖ್ಯೆ 7,969. ಈ ಪೈಕಿ ನಗರ ಪ್ರದೇಶದಲ್ಲಿ (ನಗರ ಪಾಲಿಕೆಯ ಮಿತಿ) 6,893 ಜನರು ಇದ್ದರೆ ಗ್ರಾಮೀಣರ ಸಂಖ್ಯೆ ಕೇವಲ 1,076 ಆಗಿತ್ತು. ಒಟ್ಟು ವಾಣಿಜ್ಯ ನಿರತರ ಸಂಖ್ಯೆಯಲ್ಲಿ 7,325 ಜನ ಪುರುಷರಾಗಿದ್ದರೆ ಮಹಿಳೆಯರ ಸಂಖ್ಯೆ 644.

**ಸೇರ್ಪಡೆ : ಅಧ್ಯಾಯ 17: ಪ್ರೇಕ್ಷಣೀಯ ಸ್ಥಳಗಳು**

ಎಮ್ಮಿಗನೂರು: ಹಿರೇಕೆರೂರು ತಾಲೂಕಿನ ಈ ಊರು (ಜನಸಂಖ್ಯೆ 615) ತಾಲೂಕು ಕೇಂದ್ರದಿಂದ ವಾಯುವ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಎಮ್ಮನೂರು' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ನಾಗರಖಂಡ-70 ಕ್ಕೆ ಸೇರಿದ್ದು, ಈವರೆಗೆ, ಕಲ್ಯಾಣದ ಚಾಳುಕ್ಯ, ಕಳಚೂರಿ ಹಾಗೂ ಯಾದವ ಅರಸರ ಕಾಲಕ್ಕೆ ಸೇರಿದ ಏಳು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಕ್ರಿ.ಶ. 1149 ರ ಶಾಸನ ಎಮ್ಮನೂರಲ್ಲಿ ರಾಮೇಶ್ವರ ದೇವಾಲಯವನ್ನು ಕೇತಿಸೆಟ್ಟಿಯ ಮಗ ಕಾಮಗಾವುಂಡನು ನಿರ್ಮಿಸಿ ದಾನ ಬಿಟ್ಟ ಅಂಶವನ್ನು ಹೇಳಿದರೆ, ಉಳಿದವು ವೀರಗಲ್ಲು ಶಾಸನಗಳಾಗಿದ್ದು ಊರುಳಿವಿಗಾಗಿ ಹೋರಾಡಿ ಮಡಿದ ವೀರರ ಸ್ಮಾರಕಗಳಾಗಿವೆ. ಊರ ಹೊರಗೆ ಚಿಕ್ಕೋಣತಿ ರಸ್ತೆಯಲ್ಲಿರುವ ಪರಮೇಶ್ವರ (ಶಾಸನೋಕ್ತ ರಾಮೇಶ್ವರ) ದೇವಾಲಯ, ಇದರ ಬದಿಯಲ್ಲೇ ಇರುವ ಈಶ್ವರ ಗುಡಿ, ನಟರಾಜನ ಭವ್ಯವಾದ ಶಿಲ್ಪ ಹಾಗೂ ಹುಲಿ ಬೇಟೆಯ ವಿಶಿಷ್ಟ ವೀರಗಲ್ಲುಗಳು ಈ ಊರಿನ ಆಕರ್ಷಣೆಗಳಾಗಿವೆ. ಈ ಎರಡೂ ಗುಡಿಗಳಿಂದು ಜೀರ್ಣಾವಸ್ಥೆಯಲ್ಲಿವೆ. ಈಶ್ವರ . ಡಿಯ ಗರ್ಭಗೃಹವಷ್ಟೆ ಉಳಿದಿದ್ದರೆ ಪರಮೇಶ್ವರ ಗುಡಿಯ ಗರ್ಭಗೃಹ ಹಾಗೂ ಅರ್ಧಮಂಟಪಗಳಷ್ಟೆ ಉಳಿದಿವೆ. ಈಶ್ವರ ಗುಡಿಯ ಶಿವಲಿಂಗ ಬೃಹತ್ ಪ್ರಮಾಣದಾಗಿದ್ದು, ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನದ್ದೆಂದು ತೋರುತ್ತದೆ. ಈ ಗುಡಿ ಪರಿಸರದಲ್ಲಿ ರಾಷ್ಟ್ರಕೂಟರ ಕಾಲದ ಇಟ್ಟಿಗೆಯ ಅವಶೇಷಗಳು ಚದುರಿ ಬಿದ್ದಿವೆ. ಪರಮೇಶ್ವರ

ಗುಡಿಯ ಗರ್ಭಗೃಹದಲ್ಲಿರುವ ಆಳೆತ್ತರದ ದ್ವಾದಶಭುಜ ನಟರಾಜನ ಶಿಲ್ಪ ಬಹಳ ಆಕರ್ಷಕವಾಗಿದ್ದು, ಭವ್ಯವಾಗಿದೆ. ಈ ಪರಿಸರದಲ್ಲೇ ಇರುವ ವೀರಗಲ್ಲೊಂದರಲ್ಲಿ ಯೋಧನನ್ನು ಕೊಂದು ಮುಂದೆ ನಡೆದಿರುವ ಹುಲಿಯನ್ನು ಶಿಲ್ಪಿ ಸುಂದರವಾಗಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾನೆ. ಯುಗಾದಿಯಾದ ಒಂಭತ್ತು ದಿನಕ್ಕೆ ರಾಮನವಮಿಯಂದು ಪರಮೇಶ್ವರ ಗುಡಿಯ ಜಾತ್ರೆಯಾಗುತ್ತದೆ. ಇವುಗಳೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ, ರುದ್ರದೇವರು, ದ್ಯಾಮವ್ವ ಹಾಗೂ ದುರ್ಗವ್ವನ ಗುಡಿಗಳಿವೆ. ಮಸೀದಿ ಹಾಗೂ ದರ್ಗಾಗಳೂ ಇವೆ.

**ಗದಗಿಗೆ ಸೇರ್ಪಡೆ : ಪು. 928**

**ಬಿಂಕದಕಟ್ಟಿ:** ಗದಗು ತಾಲೂಕಿನ ಈ ಊರು (ಜನಸಂಖ್ಯೆ 2115) ಗದಗಿನಿಂದ ಪಶ್ಚಿಮಕ್ಕೆ ನಾಲ್ಕು ಕಿ.ಮೀ. ದೂರದಲ್ಲಿ ಗದಗು-ಹುಬ್ಬಳ್ಳಿ ರಸ್ತೆಯಲ್ಲಿದ್ದು, ಇಲ್ಲಿ 12 ಹೆಕ್ಟೇರ್‌ನಷ್ಟು ವಿಶಾಲವಾದ ಪ್ರದೇಶದಲ್ಲಿ ವನ್ಯಮೃಗ ಸಂಗ್ರಹಾಲಯವಿದೆ. ಈ ಮೃಗಾಲಯವಿನ್ನೂ ಆರಂಭದ ಹಂತದಲ್ಲಿದ್ದರೂ ವಾರಾಂತ್ಯದ ವೀಕ್ಷಣೆ ವಿಹಾರಗಳಿಗೆ ಪ್ರಶಸ್ತವಾಗಿದೆ.

**ರಾಣೆಬೆನ್ನೂರಿಗೆ ಸೇರ್ಪಡೆ ಪು. 1002**

ರಾಣೆಬೆನ್ನೂರಿನಿಂದ ಈಶಾನ್ಯಕ್ಕೆ 14 ಕಿ.ಮೀ. ದೂರದಲ್ಲಿರುವ ಮೆಡಲೇರಿ ಬಳಿ 'ಕೃಷ್ಣಮೃಗ ಅಭಯಾರಣ್ಯ'ವಿದೆ. ವಾರಾಂತ್ಯದ ವಿಹಾರಕ್ಕೆ ಹೇಳಿ ಮಾಡಿಸಿದಂತಿರುವ ಇಲ್ಲಿ ಕೃಷ್ಣಮೃಗಗಳೊಂದಿಗೆ ತೋಳ, ಕಾಡುಹಂದಿ ಹಾಗೂ ನವಿಲುಗಳು ಹೇರಳವಾಗಿದ್ದು ಪ್ರೇಕ್ಷಣೀಯವಾದುದಾಗಿದೆ.

## ತಿದ್ದುಪಡಿ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| 6 | 6 | ಒಂದಾಗಿ | ಒಂದಾದ |
| 47 | 22 | ಘಟಕವೆಂದರೆ | ಘಟಕವೆಂದರೆ |
| 61 | 9 | ಕರ್ಟಾಟಬಲ | ಕರ್ಣಾಟಬಲ |
| 200 | 9 | ಭಾರತದ ಹುಣ್ಣಿಗೆ | ಭಾರತ ಹುಣ್ಣಿಮೆ |
| 234 | 9 | ನಮಾಜೇಜನಾಜ್ | ನಮಾಝು ಜನಾಝು |
| 236 | 20 | ಘರದಾ | ಪರದ |
| 338 | 21 | ಗುಧ್ಯಮ | ಮಧ್ಯಮ |
| 341 | 10 | ಕೋಷ್ಟಕ 5.3 | ಕೋಷ್ಟಕ 5.5 |
| 358 | 17 | ಮುರಿದೆಕೊಡಲಾಗಿದೆ | ಮುಂದೆ ಕೊಡಲಾಗಿದೆ |
| 359 | 7 | 2.80 ಲಕ್ಷ | 2.80 ಲಕ್ಷ ರೂಪಾಯಿ |
| 376 | 20 | ಸೀಮಿತವಾಗದಂತೆ | ಸೀಮಿತವಾದಂತೆ |
| 388 | 12 | 60 ಶಾಖೆಗಳ ಸಂಖೆ | 60 ಗ್ರಾಮೀಣ ಶಾಖೆಗಳ ಸಂಖ್ಯೆ |
| 402 | 20 | 1925 ರಲ್ಲಿ | ಮುಳಗುಂದದಲ್ಲಿ1925 ರಲ್ಲಿ |
| 413 | 23 | ವಸೂಲಾದ | ವಸೂಲಾದ ಸಾಲ |
| 427 | ಕೋಷ್ಟಕ 6.14 | ಸಹಕಾರಿ ಮಹಾಮಂಡಳ | ಸಹಕಾರಿ ಮಾರಾಟ |
| 442 | 2 | 644 | 5,187 |
| 453 | 26 | ಹುಬ್ಬಳ್ಳಿಯಿಂದ | ಹುಬ್ಬಳ್ಳಿಯಲ್ಲಿ |
| 454 | 8 | ಉಸ್ತುರಿಗೆ | ಉಸ್ತುವಾರಿಗೆ |
| " | " | ನೇಮಿಸಿತ್ತು | ನೇಮಿಸುತ್ತಿತ್ತು |
| " | 26 | ವಿಶೇಷವಾಗಿ | ವಿಶೇಷವಾದ |
| 463 | 22 | ಸೋಲಿಸಿದಾಗ | ಹೋಲಿಸಿದಾಗ |
| 464 | 18 | ಪಾಂಡು | ಪೌಂಡು |
| 466 | ಕೊನೆಯಸಾಲು | 174 | 1974 |
| 468 | 11 | ಸಂರಕ್ಷಿತವಾಗಿ | ಸುರಕ್ಷಿತವಾಗಿ |
| 481 | 5 ನೇ ಪಂಕ್ತಿ | ಮಾಸೂರಿಗೆ | ಮಾಸೂರಿನ |
| 485 | 8 ನೇ ಪಂಕ್ತಿ | ಎರಡನೇಯ ಮಹಾಯುದ್ಧದ ನಂತರ (1918) | ಮೊದಲನೇಯ ಮಹಾಯುದ್ಧದ ನಂತರ (1918) |
| 489 | ಕೋಷ್ಟಕ 7.9 | ಮಜಲುಗಾಡಿಗಳು | ಮಜಲು ಗಾಡಿಗಳು ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಹಾಗೂ ಖಾಸಗಿ ಬಸ್ಸುಗಳ ಮೇಲ್ಬಾಗಕ್ಕೆ ಬರಬೇಕು |
| 529 | 25 | ಎಲೆಬಳ್ಳಿ 517 ಹೆ.ಪ್ರದೇಶ | ಎಲೆಬಳ್ಳಿ ಹಾಗೂ ಹೂಗಳನ್ನು 517 ಹೆ.ಪ್ರದೇಶದಲ್ಲಿ |
| 554 | ಕೋಷ್ಟಕ 8.29 | ಮಾಸಿಕವೇತನದ ವಿವರ | ಪ್ರತಿದಿನ ವೇತನದ ವಿವರ |
| 610 | 10 | ಮೇಲ್ಲನ | ಮೇಲ್ಲನವಿ |

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| 751 | 15 | ಜಾಗಿದ್ದಾರ್ | ಜಾಗಿರ್ದಾರ್ |
| | 23 | ಅಕ್ಷರಾನುಕ್ರಮಣಿಕೆ | ಅಕ್ಷರಾನುಕ್ರಮಣಿಕೆ |
| 803 | 17 | 190-91 | 1990-91 |
| 836 | 13 | ಮೊಹೆಯಾನ | ಮಾಹೆಯಾನ |
| 852 | 14 | ಮೆಟ್ಟಕ್ಕೆ | ಮಟ್ಟಕ್ಕೆ |
| 864 | 19 | ಪ್ರಾಸಲು | ಪ್ರಾರಂಭಿಸಲು |
| 888 | 23 | ರೇಕೆರೂರು | ಹಿರೇಕೆರೂರು |
| 894 | 28 | ಹಗೂ | ಹಾಗೂ |
| 896 | 3 | ಮುಸುಕಾಗಿದ್ದು | ಮಸುಕಾಗಿದ್ದು |
| 897 | 11 | ಊಡಚವ್ವ | ಉಡಚವ್ವ |
| 908 | 32,34,35 | ಕುಣ್ಣೂರು | ಕುಣ್ಣೂರು |
| 914 | 34 | ಪ್ರತಿಷ್ಠಾಪಕೆಯ | ಪ್ರತಿಷ್ಠಾಪಿತ |
| 935 | 12 | ಊರುಳಿವಿನಲ್ಲಿ | ಊರುಳಿವಿಗಾಗಿ |
| 936 | 38 | ಇಕ್ಕೆ | ಇಕ್ಕೈ |
| 956 | 20 | ಡೆಯ್ಯನ್ ಬ್ರಾಕ್ | ಬ್ಲ್ಯಾಕ್ ಡೆಯ್ಯನ್ |
| 957 | 16 | ಪ್ರಸಿದ್ದವಾಗಿರುವ | ಪ್ರಸಿದ್ದವಾಗಿದ್ದು |
| 960 | 33 | ಕಾಡಪಪನ | ಕಾಡಪನ |
| 977 | 02 | ಶಿರ್ಶಿ | ಶಿರಸಿ |
| 980 | 26 | ರಾಮಚಮದ್ರನ | ರಾಮಚಂದ್ರನ |
| 982 | ಕೆಳಗಿನಿಂದ 04 | ರೋಣಿ | ರೋಣ |
| 993 | 10 | ಮೇಲೆರುವ | ಮೇಲಿರುವ |
| 1002 | ಕೆಳಗಿನಿಂದ 02 | ನಾಡುಗಳನ್ನಾಡುವಾಗ | ನಾಡುಗಳನ್ನಾಳುವಾಗ |
| 1009 | 07 | ಹೇಳಲಾಗಿದೆ | ಹೇಳಿಕೊಂಡಿರುವನು |
| 1010 | 02 | ಮಾಡದ | ಮಾಡಿದ |
| 1052 | ಕೆಳಗಿನಿಂದ 3 | ಮಧ್ಯಮತದ | ಮಧ್ವಮತದ |
| 1058 | 11 | ಕುಣಮಳ್ಳಿಹಳಿ | ಕುಣಿಮಳ್ಳಿಹಳ್ಳಿ |
| 1065 | 11 | ನೆಲ್ಲುಬೀಡ | ನೆಲ್ಲಿಬೀಡ |
| 1067 | | ಬಿಲ್ಲೂರ | ಚಿಲ್ಲೂರ |
| " | | Billur | Chillur |
| " | | ಬಿಲ್ಲೂರ ಬಡ್ನಿ | ಚಿಲ್ಲೂರ ಬಡ್ನಿ |
| | | Billurbadnni | Chillurbadni |
| " | | Beladur K V | Betadur K V |
| 1070 | | KV | KU |